ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

OFFICE OF THE DEPUTY COMMISSIONER, BELLARY DISTRICT, BELLARY-583101

Telephone : 08392-277100. Fax : 08392-272538 Email: dcbellary@gmail.com

ನಂ.ಕಂ.ಸಿಬ್ಬಂದಿ.2/ 245/ 2014-15 ದಿನಾಂಕ: 26 -02-2016

## : : ಅಧಿಕೃತ ಜ್ಞಾಪನಾ : :

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 19 ಹಾಗೂ ಸ್ಥಳಿಯೇತರ ವೃಂದದಲ್ಲಿ ಖಾಲಿ ಇರುವ 42 ಒಟ್ಟು 61 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ಅಂತಿಮ, ಆಯ್ಕೆಯ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ: ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:-26-02-2016

-000-

ಈ ಕಾರ್ಯಾಲಯದ ಉಲ್ಲೇಖಿತ ಅಧಿಸೂಚನೆಯ ದಿನಾಂಕ:- 26 -02-2016 ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 19 ಹಾಗೂ ಸ್ಥಳೀಯೇತರ ವೃಂದಲ್ಲಿ ಖಾಲಿ ಇರುವ 42 ಒಟ್ಟು 61 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಚುರ ಪಡಿಸಲಾಗಿರುತ್ತದೆ.

ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ದಿನಾಂಕ:-05.03.2016 ರಂದು ಬೆಳಿಗೆ 11-00 ರಿಂದ ಸಾಯಂಕಾಲ 5-30 ರ ಒಳಗಾಗಿ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಖುದ್ದಾಗಿ ಹಾರಪಡಿಸತಕ್ಕದ್ದು.

1) ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಮೂಲ ಅಂಕಪಟ್ಟಿ
2) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳು.
3) ಇತ್ತೀಚಿನ (2) ಭಾವ ಚಿತ್ರಗಳು.
4) ಗ್ರಾಮೀಣ ಮೀಸಲಾತಿ ಮೂಲ ಪ್ರಮಾಣ ಪತ್ರ (ಗ್ರಾಮೀಣ ಮೀಸಲಾತಿಯಡಿಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
5) ಕನ್ನಡ ಮಾಧ್ಯಮ ಪ್ರಮಾಣ ಪತ್ರ (ಕನ್ನಡ ಮಾಧ್ಯಮ ಮೀಸಲಾತಿಯಡಿಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
6) ಸೇನೆಯಿಂದ ಬಿಡುಗಡೆ ಹೊಂದಿದ ಪ್ರಮಾಣ ಪತ್ರ (ಪುಸ್ತಕ) (ಮಾಜಿ ಸೈನಿಕ ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
7) ಅಂಗವಿಕಲ ಪ್ರಮಾಣ ಪತ್ರ (ಅಂಗವಿಕಲ ಮೀಸಲಾತಿಯಡಿಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
8) ನಿಗದಿತ ನಮೂನೆಯಲ್ಲಿ ರೂ. 50/- ಬಾಂಡ್ ಪೇಪರ್ ಮೇಲೆ ಮುಚ್ಚಳಿಕೆ ಪತ್ರ ಮತು ಅರ್ಜಿ ಸಲ್ಲಿಸುವಾಗ ನಮೂದಿಸಲಾದ ಎಲ್ಲಾ ದಾಖಲೆಗಳ ವಿವರ.

26/2

(ಸಮೀರ್ ಶುಕ್ಲ) ಭಾ.ಆ.ಸೇ.
ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ/ಬಳ್ಳಾರಿ.

ಗೆ,
ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ.

## : : ಮುಚ್ಚಳಿಕೆ ಪ್ರಮಾಣ ಪತ್ರ : :

ಮಾನ್ಯ ಅಧ್ಯಕ್ಷರು ಗ್ರಾಮ ಲೆಕ್ಕಿಗರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಸಮಕ್ಷಮ

ಈ ಕೆಳಗೆ ಸಹಿ ಮಾಡಿದ ನಾನು ಅಂದರೆ ಶ್ರೀ/ಶ್ರೀಮತಿ/ ಕುಮಾರ/ಕುಮಾರಿ _____ ಬರೆದುಕೊಡುವ ಮುಚ್ಚಳಿಕೆ ಏನೆಂದರೆ ನಾನು ಬಳ್ಳಾರಿ ಜಿಲ್ಲೆಯ ಕಂದಾಯ ಘಟಕದ ಗ್ರಾಮ ಲೆಕ್ಕಿಗ ನೇರ ನೇಮಕಾತಿ ಮೂಲಕ ಹುದ್ದೆಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಲಾಗಿ, ನನ್ನ ವಿದ್ಯಾರ್ಹತೆಯ ಅನುಗುಣವಾಗಿ ಅಂತಿಮ ಆಯ್ಕೆ ಪಟ್ಟಿಗೆ ಅರ್ಹತೆ ಪಡೆದಿರುತ್ತೇನೆ. ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ಎಲ್ಲಾ ದಾಖಲೆಗಳು ಸತ್ಯದಿಂದ ಕೂಡಿರುತ್ತದೆ ಹಾಗೂ ನೈಜವಾಗಿರುತ್ತದೆ. ವಿವರ ಈ ಕೆಳಗಿನಂತಿವೆ.

| ಕ್ರ.ಸಂ | ದಾಖಲಾತಿಗಳ ವಿವರ | ಪ್ರಮಾಣ ಪತ್ರ ಪಡೆದ ದಿನಾಂಕ | ಪ್ರಾಧಿಕಾರ |
|---|---|---|---|
| | | | |

ನೇಮಕಾತಿ ಪ್ರಾಧಿಕಾರವು ನಾನು ಸಲ್ಲಿಸಿದ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆ/ಪರೀಕ್ಷಾ ಮಂಡಳಿ/ ಯ ಪರಿಶೀಲನೆಗೆ ಒಳಪಡಿಸಬಹುದು ಹಾಗೂ ಅವುಗಳು ಸುಳ್ಳಿನಿಂದ ಕೂಡಿವೆ ಎಂದು ಧೃಡ ಪಟ್ಟಲ್ಲಿ ನನ್ನ ಆಯ್ಕೆಯನ್ನು ರದ್ದು ಪಡಿಸಲು ನನ್ನದು ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಹಿ/-

ದಿನಾಂಕ:-
ಸ್ಥಳ:-